

# ವಧುವಿಗಿಂತ ಉಡುಪೇ ಭಾರ!



ವಧುವಿನ ತೂಕ 60 ಕಿಲೋ. ಅವಳು ತೊಟ್ಟ ವಿವಾಹದ ಉಡುಪಿನ ತೂಕ ಅರವತ್ತೂರೂವರೆ ಕಿಲೋ. ಅದನ್ನು ತಯಾರಿಸಲು ಖರ್ಚಾದದ್ದು 6 ಸಾವಿರ ಪೌಂಡ. ವಧುವಿನ ಹೆಸರು ರೆಬೆಕಾ ಮಕ್ಗ್ಯಾಮ್.  ತನ್ನ ವಿವಾಹದ ಸಂದರ್ಭದಲ್ಲಿ ರೆಬೆಕಾ ಅದನ್ನು ಉಟ್ಟೋ ಅಥವಾ ಹೊತ್ತೋ ಸಂಭ್ರಮಿಸುತ್ತಿದ್ದಳು. ಆಕೆ ಜಿಪ್ಸಿ ಎಂಬ ಅಲೆಮಾರಿ ಜನಾಂಗಕ್ಕೆ ಸೇರಿದ ಹೆಣ್ಣು. ಜಿಪ್ಸಿಗಳು ತಮ್ಮ ಮದುವೆಯಲ್ಲಿ ಅತಿ ಹೆಚ್ಚು ಗಮನಹರಿಸುವದು ಹಾಗೂ ಅತಿ ಹೆಚ್ಚು ಖರ್ಚು ಮಾಡುವುದು ವಿವಾಹಿತರ ಉಡುಪಿಗಾಗಿ.

ಈ ಭಾರೀ ಉಡುಪನ್ನು ಸಿದ್ಧಪಡಿಸಲು ಸುಮಾರು ಒಂದು ಎಕರೆಯಷ್ಟು ವಿಸ್ತಾರದ ಬಟ್ಟೆಯನ್ನು ಬಳಸಲಾಗಿದೆ. ಅದು ವಧುವಿನ ಸುತ್ತ ಆಕರ್ಷಕವಾಗಿ ಸೆಟೆದು ನಿಲ್ಲಲು ಎಂಟು ಲೋಹದ ಹುಕ್ಕುಗಳನ್ನು ಅಳವಡಿಸಲಾಗಿದೆಯಂತೆ.  ಈ ಶುಭ್ರವಾದ ಉಡುಪಿನ ಸೌಂದರ್ಯವನ್ನು ಹೆಚ್ಚಿಸಲು ಹಲವು ಹರಳು ಹಾಗೂ ಸ್ಪಟಿಕಗಳನ್ನು ಅಳವಡಿಸಲಾಗಿದೆ.  ವುಡ್‌ಫೋರ್ಡ್ ಗ್ರೀನ್‌ನಲ್ಲಿರುವ 'ಬೇಬ್ ಟು ಬ್ರೈಬ್' ಕಂಪೆನಿಯು ಈ ಉಡುಪನ್ನು ಸಿದ್ಧಪಡಿಸಿದೆ. ಅಲ್ಲಿ ಕೆಲಸ ಮಾಡುವ ಲಿಂಡಾ ಮತ್ತು ಟ್ರಿಶ್ ಎಂಬ ಕಲಾವಿದರ ವಿಶೇಷ ಪರಿಶ್ರಮದಿಂದ ಈ ಭವ್ಯ ಉಡುಪು ರೂಪ ತಳೆದಿದೆ. ಇಷ್ಟು ದೊಡ್ಡ ಪೋಷಾಕನ್ನು ಉಟ್ಟುಕೊಳ್ಳಲು ರೆಬೆಕಾಗೆ ಕೇವಲ 20 ನಿಮಿಷ ಬೇಕಾಯಿತಂತೆ.

ವಧು ರೆಬೆಕಾಳ ವಯಸ್ಸು 39. ಅವಳು ವಿವಾಹವಾದ್ದು 42 ವಯಸ್ಸಿನ ಕೆಲ್ವಿನ್ ಸ್ಮಿತ್‌ನನ್ನು. ಅದೇನೂ ಅವರಿಬ್ಬರಿಗೂ ಮೊದಲ ವಿವಾಹವಲ್ಲ. ರೆಬೆಕಾಗೆ ಆಗಲೇ 3 ಮಕ್ಕಳಿದ್ದಾರೆ; 18 ವರ್ಷ ಒಬ್ಬ ಮಗ ಹಾಗು 15 ಹಾಗೂ 10 ವರ್ಷಗಳ ಇಬ್ಬರು ಹೆಣ್ಣುಮಕ್ಕಳು. ವರ ಕೆಲ್ವಿನ್‌ಗೆ 14 ಹಾಗೂ 12 ವರ್ಷಗಳ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ವಧುವರರ ಐದೂ ಮಕ್ಕಳು ಅಪ್ಪಅಮ್ಮರ ಮದುವೆಯಲ್ಲಿ ಸಂಭ್ರಮಿಸಿದ್ದಾರೆ.

ಅಂದ ಹಾಗೆ ಈ ವಿವಾಹ ನಡೆದದ್ದು ಮಧ್ಯ ಇಂಗ್ಲೆಂಡಿನ ಕೊವೆಂಟ್ರಿ ಎಂಬ ಊರಲ್ಲಿ. ಆ ಊರು ಎರಡನೆಯ ಜಾಗತಿಕ ಮಹಾಯುದ್ಧದಲ್ಲಿ ನಿರ್ನಾಮವಾಗಿತ್ತಂತೆ.

■ ಸುಭಾಸ ಯಾದವಾಡ